**O.S.** 3/2014

ಡಿ ಡಬ್ಲ್ಯೂ- **1**

<u>ಸಾಕ್ಷಿಯನ್ನು ದಿಃ **09.09.2021** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಎಸ್ ಜಿ ಎ ವಕೀಲರಿಂದಃ</u>**

ನಾನು ಎಂ ಎಸ್ ಸಿ ಪದವೀದರ. ನಾನು ಕರ್ನಾಟಕ ರಾಜ್ಯವಿಮಾ ಇಲಾಖೆಯಲ್ಲಿ ಅಧೀಕ್ಷಕನಾಗಿ ನಿವೃತ್ತಿ ಹೊಂದಿದ್ದೇನೆ. ನಾನು ಈಗ ತುಮಕೂರನಲ್ಲಿ ವಾಸವಾಗಿದ್ದೇನೆ. ನಾನು ಕೆಲಸಕ್ಕೆ ಸೇರಿದಾಗಿನಿಂದ ತುಮಕೂರಿನಲ್ಲಿ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಾನು ಮೈಸೂರಿನಲ್ಲಿ, ಮಂಡ್ಯದಲ್ಲಿ ವಾಸವಾಗಿದ್ದೆ ಎಂದು ಉತ್ತರಿಸುತ್ತಾರೆ . ನಾನು ಜುಲೈ 2012 ರಲ್ಲಿ ನಿವೃತ್ತಿ ಹೊಂದಿದ್ದೇನೆ. ಹನುಮಂತಯ್ಯನವರ ಮರಣ ಪ್ರಮಾಣ ಪತ್ರ ನಿಮಗೆ ಎಲ್ಲಿ ಸಿಕ್ಕಿತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 3 ನೇ ಪ್ರತಿವಾದಿಯ ಮನೆಯಲ್ಲಿ ಸಿಕ್ಕಿತು ಎಂದು ಉತ್ತರಿಸುತ್ತಾರೆ. ನಾನು ಹಾಗೂ **3** ನೇ ಪ್ರತಿವಾದಿ ಬೇರೆ ಬೇರೆ ವಾಸವಾಗಿದ್ದೇವೆ. ನಾನು **3** ನೇ ಪ್ರತಿವಾದಿ ಮಂಜಮ್ಮನ ಮನೆಯಲ್ಲಿ ನೋಡಿದ ಮರಣ ಪ್ರಮಾಣ ಪತ್ರ ಹನುಮಂತಯ್ಯನದ್ದು. ಸದರಿ ಹನುಮಂತಯ್ಯನ ತಂದೆ ಹೆಸರು ಜುಂಜಪ್ಪ. ಸಾಕ್ಷಿ ಮುಂದುವರೆದು ದಾಖಲಾತಿಗಳನ್ನು ನೋಡಿದ ಪ್ರಕಾರ ಆತನ ತಂದೆಯ ಹೆಸರು ಜುಂಜಪ್ಪ ಎಂದು ಗೊತ್ತಾಯಿತು ಎಂದು ಉತ್ತರಿಸುತ್ತಾರೆ. ಆ ಹನುಮಂತಯ್ಯ ಯಾವ ಜುಂಜಪ್ಪನ ಮಗ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಹನುಮಂತಯ್ಯ ನನ್ನ ಚಿಕ್ಕಪ್ಪ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪನ ಮಗ ವಾದಿಯಾಗಿದ್ದು ಆತನಿಗೆ ಪಾಲು ಕೊಡಬೇಕಾಗುತ್ತದೆ ಎನ್ನುವ ಕಾರಣದಿಂದ ನಮ್ಮ ಸಂಬಂಧವನ್ನೆ ಅಲ್ಲಗಳೆಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾರ್ಶಪ್ಪ ಎನ್ನುವವರು ನನ್ನ ತಾತ ಜುಂಜಪ್ಪನ ಕೊನೆಯ ತಮ್ಮ. ಸದರಿ ನಾರ್ಶಪ್ಪನ ಹೆಣ್ಣುಮಕ್ಕಳ ಹೆಸರು ಗೌರಮ್ಮ ಹಾಗೂ ಕೆಂಚಮ್ಮ ಎಂದರೆ ಸರಿ. ಸದರಿ ಗೌರಮ್ಮ ಹಾಗೂ ಕೆಂಚಮ್ಮ, ನನ್ನ ವಿರುದ್ಧ, ತಿಮ್ಮಕ್ಕ, ಪಾರ್ವತಮ್ಮ ಹಾಗೂ ನಾಗೇಂದ್ರನ ಹೆಂಡತಿ ಮಂಜಮ್ಮನ ವಿರುದ್ಧ ಓಎಸ್ ನಂ.**24/2015** ಎನ್ನುವ ದಾವೆ ಹೂಡಿದ್ದಾರೆ ಎಂದರೆ ಸಾಕ್ಷಿ ತನಗೆ ಅದರ ನೋಟೀಸ್

ಬಂದಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಓಎಸ್ ನಂ.24/2015 ರ ವಾದ ಪತ್ರದ ದೃಢೀಕೃತ ಪ್ರತಿಯನ್ನು ತೋರಿಸಿ ಅದರಲ್ಲಿ 3 ನೇ ಪ್ರತಿವಾದಿಯಾಗಿ ನಿಮ್ಮ ಹೆಸರು ಇದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ಆ ದಾಖಲೆಯನ್ನು ನೋಡಿ, ತನ್ನ ಹೆಸರು ಇದೆ ಎಂದು ನುಡಿದಿದ್ದರಿಂದ ಆ ದಾಖಲೆಯನ್ನು ನಿಪಿ-133 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಅದರಲ್ಲಿ ನಮೂದಿಸಿದ ವಿಳಾಸದಲ್ಲಿ ತಾನು ವಾಸವಾಗಿಲ್ಲ, ಅದರ ನೋಟೀಸ್ ತನಗೆ ಬಂದಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಒಂದು ವಂಶವೃಕ್ಷದ ದೃಢೀಕೃತ ಪ್ರತಿಯನ್ನು ತೋರಿಸಿ ಅದು ಹನುಮೇಗೌಡರ ವಂಶವೃಕ್ಷ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ಅದು ಅವರ ವಂಶವೃಕ್ಷ ಆಗಿರಬಹುದು ಎಂದು ನುಡಿದಿದ್ದರಿಂದ ಅದನ್ನು ನಿಪಿ.134 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಬೈರಮ್ಮ ಹಾಗೂ ರಾಮಚಂದ್ರ ತಮ್ಮ ವಂಶಕ್ಕೆ ಸೇರಿದವರಲ್ಲ ಎಂದು ಉತ್ತರಿಸುತ್ತಾರೆ. ನಾವು ಹಾಗೂ ವಾದಿ ದಾವಾಸ್ತಿಗಳ ಜಂಟಿ ಸ್ವಾಧೀನತೆಯಲ್ಲಿ ಇದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಪ್ರತಿವಾದಿಗಳು ಮಾತ್ರ ಸ್ವಾಧೀನತೆಯಲ್ಲಿ ಇದ್ದೇವೆ ಎಂದು ಉತ್ತರಿಸುತ್ತಾರೆ.

ದಾವಾ ಐಟಂ ನಂ.1 ರಿಂದ 4 ರ ಸ್ವತ್ತುಗಳು ಸಿದ್ದಮ್ಮ ಹಾಗೂ ಬೈರಮ್ಮನ ಜಂಟಿ ಖಾತೆಯಲ್ಲಿವೆ ಎಂದರೆ ಸರಿ . 2003-04 ರಿಂದ ಇಲ್ಲಿಯವರೆಗೂ ದಾವಾ ಐಟಂ ನಂ.1 ರಿಂದ 4 ರ ಸ್ವತ್ತುಗಳು ಪೌತಿಖಾತೆಯಾಗಿ ಜಂಟಿ ಖಾತೆಯಲ್ಲಿವೆ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.